<u>ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ, ನ್ಯಾಯಾಲಯ, ಬ್ಯಾಡಗಿ.</u>

**ಸಿಸಿ.ನಂ.76/2023**

<u>ದೂರುದಾರರುಃ</u>
ಕರ್ನಾಟಕ ರಾಜ್ಯ , ಬ್ಯಾಡಗಿ ಪೋಲಿಸ್ ಠಾಣೆ, ಬ್ಯಾಡಗಿ

ವಿರುದ್ಧ

<u>ಆರೋಪಿತರುಃ</u>

1.ಮಹಾಂತೇಶ ಚನ್ನಬಸಪ್ಪ ಬಳ್ಳೇರ, ವಯಾಃ 38 ವರ್ಷ
ಉದ್ಯೋಗಃ ಶೇತ್ಕಿರಿ, ಸಾಃ ಬನ್ನಿಹಟ್ಟಿ ತಾಃ ಬ್ಯಾಡಗಿ, ಜಿಃ ಹಾವೇರಿ.

2.ಮರಡೆಪ್ಪ ಶಿವಲಿಂಗಪ್ಪ ಬಳ್ಳೇರ, ವಯಾಃ 38 ವರ್ಷ
ಉದ್ಯೋಗಃ ಚಾಲಕ, ಸಾಃ ಬನ್ನಿಹಟ್ಟಿ ತಾಃ ಬ್ಯಾಡಗಿ, ಜಿಃ ಹಾವೇರಿ.

3.ಮರಡೆಪ್ಪ ಚನ್ನಬಸಪ್ಪ ಬಳ್ಳೇರ, ವಯಾಃ 36 ವರ್ಷ
ಸಾಃ ಬನ್ನಿಹಟ್ಟಿ ತಾಃ ಬ್ಯಾಡಗಿ, ಜಿಃ ಹಾವೇರಿ.

4.ಚನ್ನಬಸಪ್ಪ ಹೊಳಬಸಪ್ಪ ಹೊಸೂರು, ವಯಾಃ 65 ವರ್ಷ
ಉದ್ಯೋಗಃ ಶೇತ್ಕಿರಿ, ಸಾಃ ಬನ್ನಿಹಟ್ಟಿ ತಾಃ ಬ್ಯಾಡಗಿ, ಜಿಃ ಹಾವೇರಿ.

5. ಚನ್ನಬಸಪ್ಪ ಪುಟ್ಟಪ್ಪ ಚನ್ನಳ್ಳಿ, ವಯಾಃ 70 ವರ್ಷ
ಉದ್ಯೋಗಃ ಶೇತ್ಕಿರಿ, ಸಾಃ ಬನ್ನಿಹಟ್ಟಿ ತಾಃ ಬ್ಯಾಡಗಿ, ಜಿಃ ಹಾವೇರಿ.

6.ಶ್ರೀಮತಿ ಭಾಗ್ಯ ಮಾಲತೇಶ ಬಳ್ಳೇರ, ವಯಾಃ 32 ವರ್ಷ
ಉದ್ಯೋಗಃ ಮನೆಗೆಲಸ, ಸಾಃ ಬನ್ನಿಹಟ್ಟಿ ತಾಃ ಬ್ಯಾಡಗಿ, ಜಿಃ ಹಾವೇರಿ.

7.ಕರಬಸಪ್ಪ ಮಲಕಪ್ಪ ಕುರುವತ್ತಿ, ವಯಾಃ 35 ವರ್ಷ
ಉದ್ಯೋಗಃ ಶೇತ್ಕಿರಿ, ಸಾಃ ಬನ್ನಿಹಟ್ಟಿ ತಾಃ ಬ್ಯಾಡಗಿ, ಜಿಃ ಹಾವೇರಿ.

8.ಶ್ರೀಮತಿ ಮಂಜವ್ವ ಕರಬಸಪ್ಪ ಕುರುವತ್ತಿ, ವಯಾಃ 28 ವರ್ಷ
ಉದ್ಯೋಗಃ ಮನೆಗೆಲಸ, ಸಾಃ ಬನ್ನಿಹಟ್ಟಿ, ತಾಃ ಬ್ಯಾಡಗಿ, ಜಿಃ ಹಾವೇರಿ.

9.ಉಳಿವೆಪ್ಪ ಮಲಕಪ್ಪ ಕುರುವತ್ತಿ, ವಯಾಃ 38 ವರ್ಷ
ಉದ್ಯೋಗಃ ಶೇತ್ಕಿರಿ, ಸಾಃ ಬನ್ನಿಹಟ್ಟಿ, ತಾಃ ಬ್ಯಾಡಗಿ, ಜಿಃ ಹಾವೇರಿ.

10.ಮಲಕಪ್ಪ ಸಣ್ಣಿಂಗಪ್ಪ ಕುರುವತ್ತಿ, ವಯಾಃ 70 ವರ್ಷ
ಉದ್ಯೋಗಃ ಶೇತ್ಕಿರಿ, ಸಾಃ ಬನ್ನಿಹಟ್ಟಿ, ತಾಃ ಬ್ಯಾಡಗಿ, ಜಿಃ ಹಾವೇರಿ.

11.ಶ್ರೀಮತಿ ನೀಲವ್ವ ಮರಡೆಪ್ಪ ಬಳ್ಳೇರ, ವಯಾಃ 30 ವರ್ಷ
ಉದ್ಯೋಗಃ ಮನೆಗೆಲಸ, ಸಾಃ ಬನ್ನಿಹಟ್ಟಿ, ತಾಃ ಬ್ಯಾಡಗಿ, ಜಿಃ ಹಾವೇರಿ.

12.ಮಲಕಪ್ಪ ಭರಮಪ್ಪ ಚನ್ನಳ್ಳಿ, ವಯಾಃ 50 ವರ್ಷ
ಉದ್ಯೋಗಃ ಶೇತ್ಕಿರಿ, ಸಾಃ ಬನ್ನಿಹಟ್ಟಿ, ತಾಃ ಬ್ಯಾಡಗಿ, ಜಿಃ ಹಾವೇರಿ.

## ದೋಷಾರೋಪಣೆ

ನಾನು ಸುರೇಶ ವಗ್ಗನವರ, ಎಂ. ಎ. ಎಲ್. ಎಲ್. ಬಿ. ಸ್ಪೇಷಲ್, ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬ್ಯಾಡಗಿ ನಿಮ್ಮ ಮೇಲೆ ಹೊರಸುವ ದೋಷಾರೋಪಣೆ ಏನೇಂದರೆಃ

ಬ್ಯಾಡಗಿ ಪೊಲೀಸ್ ಠಾಣಾ ವ್ಯಾಪ್ತಿಯ ಬನ್ನಿಹಟ್ಟಿ ಗ್ರಾಮದ ಹದ್ದಿಯಲ್ಲಿ ಪಿರ್ಯಾದಿ ಹೆಸರಿನಲ್ಲಿ ಖಾಲಿ ಜಾಗೆ ಮತ್ತು ಮನೆ ಇದ್ದು ಆಸ್ತಿ ನಂಬರ್ 73 ಅಂತಾ ಇದ್ದು, ಈ ಆಸ್ತಿಯಲ್ಲಿ ಪಿರ್ಯಾದಿ ಹಾಕಿರುವ ತೆಂಗಿನ ಗಿಡಗಳಿಗೆ ದಿನಾಂಕಃ 04.03.2023 ರಂದು ಮುಂಜಾನೆ 8.30 ಗಂಟೆ ಸುಮಾರಿಗೆ ಪಿರ್ಯಾದಿ ನೀರು ಹಾಕುತ್ತಿರುವಾಗ ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಏಕೋದ್ದೇಶ ಸಾಧಿಸುವ ಸಲುವಾಗಿ ಪಿರ್ಯಾದಿ ಜೊತೆ ತಂಟೆ ತೆಗೆದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 143 ಸಹಕಲಂಃ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಏಕೋದ್ದೇಶ ಸಾಧಿಸುವ ಸಲುವಾಗಿ ಪಿರ್ಯಾದಿ ಜೊತೆಗೆ ತಂಟೆ ತೆಗೆದು ದೊಂಬಿ ಎಬ್ಬಿಸಿದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 147 ಸಹಕಲಂಃ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಕೈಯಲ್ಲಿ ಬಡಿಗೆಯನ್ನು ಹಿಡಿದುಕೊಂಡು ಬಂದು ಏಕೋದ್ದೇಶ ಸಾಧಿಸುವ ಸಲುವಾಗಿ ಪಿರ್ಯಾದಿ ಜೊತೆಗೆ ತಂಟೆ ತೆಗೆದು ದೊಂಬಿ ಎಬ್ಬಿಸಿದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 148 ಸಹಕಲಂಃ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಬಂದು ಏಕೋದ್ದೇಶ ಸಾಧಿಸುವ ಸಲುವಾಗಿ ಪಿರ್ಯಾದಿ ಕುತ್ತಿಗೆ ಹಿಡಿದು ದುಕಾಡಿ ನೆಲಕ್ಕೆ ಕೆಡವಿ, ಪಿರ್ಯಾದಿ ಅಕ್ಕನಿಗೆ ನೆಲಕ್ಕೆ ಕೆಡವಿ ಸಿಕ್ಕಸಿಕ್ಕಲ್ಲಿ ಹೊಡಿಬಡಿ ಮಾಡಿ, ಕಾಲಿನಿಂದ ಒದ್ದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 323 ಸಹಕಲಂಃ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಬಂದು ಏಕೋದ್ದೇಶ ಸಾಧಿಸುವ ಸಲುವಾಗಿ ಹೇಮವ್ವಳಿಗೆ ಆರೋಪಿತರಾದ ನೀವೆಲ್ಲರೂ ಸೇರಿ ಬಡಿಗೆಯಿಂದ ಸಿಕ್ಕಸಿಕ್ಕಲ್ಲಿಗೆ ಹೊಡೆದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 324 ಸಹಕಲಂಃ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಆರನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಬಂದು ಏಕೋದ್ದೇಶ ಸಾಧಿಸುವ ಸಲುವಾಗಿ ಹೇಮವ್ವಳಿಗೆ ಸೀರೆ ಹಿಡಿದು ಎಳೆದಾಡಿದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಲಂಃ 354 ಸಹಕಲಂಃ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಏಳನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಬಂದು ಏಕೋದ್ದೇಶ ಸಾಧಿಸುವ ಸಲುವಾಗಿ ಪಿರ್ಯಾದಿಯ ಜಾಗೆಯಲ್ಲಿ ಅತೀಕ್ರಮ ಪ್ರವೇಶ ಮಾಡಿದ ಅಪರಾಧಕ್ಕಾಗಿ ಭಾರತ ದಂಡ ಸಂಹಿತೆ ಕಲಂ 447 ಸಹಕಲಂ 149 ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎಂಟನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಬಂದು ಏಕೋದ್ದೇಶ ಸಾಧಿಸುವ ಸಲುವಾಗಿ 1 ನೇ ಆರೋಪಿತನಾದ ನೀವು ಪಿರ್ಯಾದಿಗೆ ಏ ಮಿಂಡ್ರಿ ಮಗನಾ ತೆಂಗಿನ ಗಿಡಗಳನ್ನು ಬೆಳಸುತ್ತೀಯಾ ನಿಮ್ಮವ್ವ ತಾಯಿನ ಹಡಾ ಅಂತಾ ಅವಾಚ್ಯವಾಗಿ ಬೈಯ್ದಾಡುತ್ತಾ, ಆಗ ಬಿಡಿಸಿಕೊಳ್ಳಲು ಬಂದು ಗಾಯಾಳು ಹೇಮವ್ವ ಇವರು ಯಾಕೇ ಈ ರೀತಿಯಾಗಿ ಮಾಡುತ್ತೀಯಾ ಅಂತಾ ಕೇಳಿದಾಗ ಆಗ

ಆರೋಪಿತರಾದ ನೀವೆಲ್ಲರೂ ಸಂಗನಮತ ಮಾಡಿಕೊಂಡು ಅವಾಚ್ಯಶಬ್ದಗಳಿಂದ ಮಿಂಡ್ರಿ ಮಗನ, ಸೂಳೆ ಮಗನಾ, ಮಿಂಡ್ರಿ, ಹಾದರಗಿತ್ತಿ ಅಂತಾ ಬೈಯ್ದಾಡುತ್ತಾ ಇಲ್ಲಿ ಏನ ತಂಗಿನ ಗಿಡ ಹಚ್ಚುತ್ತೀರಿ ಅಂತಾ ಅನ್ನುತ್ತಾ ಕೇಕೆ ಹಾಕುತ್ತಾ ಬಂದ ಅಪರಾಧಕ್ಕಾಗಿ ಭಾರತ ದಂಡ ಸಂಹಿತೆ ಕಲಂ 504 ಸಹಕಲಂ 149 ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಗುಂಪುಕಟ್ಟಿಕೊಂಡು ಏಕೋದ್ದೇಶ ಸಾಧಿಸುವ ಸಲುವಾಗಿ ಪಿರ್ಯಾದಿಗೆ ನಿನ್ನ ಅಕ್ಕನಿಗೆ ಪೀಸ್ ಪೀಸ್ ಮಾಡುತ್ತೇವೆ ಅಂತಾ ಅನ್ನುತ್ತಾ, ಊರಲ್ಲಿ ಇದ್ದು ಬಾಳ್ವೆ ಮಾಡಿರಿ ಅಂತಾ ಜೀವದ ಧಮಕಿ ಹಾಕಿ ಜೀವ ಭಯವನ್ನುಂಟು ಮಾಡಿದ ಅಪರಾಧಕ್ಕಾಗಿ ಭಾರತ ದಂಡ ಸಂಹಿತೆ ಕಲಂ 506 ಸಹಕಲಂ 149 ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಈ ಮೇಲಿನ ಅಪರಾಧಗಳು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ, ಅವು ನನ್ನಿಂದ ವಿಚಾರಣೆಯಾಗಲ್ಪಡುತ್ತವೆಂದು ತಿಳಿಯಬಯಸುತ್ತೇನೆ.)

ದಿನಾಂಕ: 19.03.2024

(ಸುರೇಶ ವಗ್ಗನವರ)
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.

ಪ್ರಶ್ನೆ 1). ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೆ?

ಉತ್ತರ : 1 ನೇ ಆರೋಪಿ:
2 ನೇ ಆರೋಪಿ:
3 ನೇ ಆರೋಪಿ:
4 ನೇ ಆರೋಪಿ:
5 ನೇ ಆರೋಪಿ:
6 ನೇ ಆರೋಪಿ:
7 ನೇ ಆರೋಪಿ:
8 ನೇ ಆರೋಪಿ:
9 ನೇ ಆರೋಪಿ:
10 ನೇ ಆರೋಪಿ:

11 ನೇ ಆರೋಪಿ:
12 ನೇ ಆರೋಪಿ:

ಪ್ರಶ್ನೆ .2) ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರ : 1 ನೇ ಆರೋಪಿ:
2 ನೇ ಆರೋಪಿ:
3 ನೇ ಆರೋಪಿ:
4 ನೇ ಆರೋಪಿ:
5 ನೇ ಆರೋಪಿ:
6 ನೇ ಆರೋಪಿ:
7 ನೇ ಆರೋಪಿ:
8 ನೇ ಆರೋಪಿ:
9 ನೇ ಆರೋಪಿ:
10 ನೇ ಆರೋಪಿ:
11 ನೇ ಆರೋಪಿ:
12 ನೇ ಆರೋಪಿ:

(ಈ ಮೇಲಿನ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಎಂಂದು ದೃಡಿಕರಿಸುತ್ತೇನೆ.)

ದಿನಾಂಕ: 19.03.2024

(ಸುರೇಶ ವಗ್ಗನವರ)
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.